<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u>

ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲೆ ಮಾಡಲಾದ ಆದೇಶದನ್ವಯ ಪುನಃ ಕರೆಯಿಸಿ
ಪ್ರಮಾಣ ವಚನ ಮಾಡಲಾದ ದಿ : 19.03.2024
ಪಾಟಿ ಸವಾಲು : ಆರೋಪಿ ಪರ ಶ್ರೀ ಎಸ್.ಎಂ ವಕೀಲರಿಂದ

ಯಾವ ದಿನ ಏನು ಗಲಾಟೆ ನಡೆಯಿತು ಎಂದು ಹೇಳಲಾಗುವುದಿಲ್ಲ ಕಾರಣ ಮರೆತಿದ್ದೇನೆ. ಆರೋಪಿತರು ನನಗೆ ಮತ್ತು ನನ್ನ ತಮ್ಮನಿಗೆ/ಪ್ರಾಸಾ-1 ರವರಿಗೆ ಹಲ್ಲೆ ಮಾಡಿದ್ದೇನೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾಲು.1 ಮತ್ತು 2 ಅನ್ನು ಈ ಕೇಸಿನ ಸಲುವಾಗಿ ಸೃಷ್ಟಿ ಮಾಡಲಾಗಿದ್ದು ಅದು ಗೊತ್ತಿದ್ದರೂ ಕೂಡ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾವು ಸರ್ಕಾರಿ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದೇವೆಂದು ತಹಶೀಲ್ದಾರ್ ರವರಿಗೆಹಾಗೂ ಉಪವಿಭಾಗಾಧಿಕಾರಿಯವರಿಗೆ 1ನೇ ಆರೋಪಿ ತಾಯಿ ದೂರು ನೀಡಿದ್ದರು ಎಂದರೆ ನೀಡಿರಬಹುದುಎಂದು ನುಡಿಯುತ್ತಾರೆ. ನನಗೆ ಮತ್ತು ನನ್ನ ತಮ್ಮನಿಗೆ ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ತೆರವು ಮಾಡಬೇಕೆಂದು ತಹಶೀಲ್ದಾರ್ ರವರು ನೋಟೀಸ್ ಕೂಡ ನೀಡಿದ್ದರು ಎಂದರೆ ಸುಳ್ಳು. ನಾನು ಮತ್ತು ನನ್ನ ತಮ್ಮ ಆರೋಪಿ-1 ಹಾಗೂ ಆಕೆಯ ತಾಯಿಗೆ ಪ್ರಾಣ ಬೆದರಿಕೆ ಹಾಕಿದ್ದೇವೆ ಎನ್ನುವ ವಿಚಾರಕ್ಕೆ ಸಂಬಂಧಿಸಿದಂತೆ 2ಬಾರಿ ಕೆ.ಆರ್.ಸಾಗರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಅದರ ಸಂಬಂಧ ಎನ್.ಸಿ.ಆರ್ ಕೂಡ ದಾಖಲಾಗಿತ್ತು ಎಂದರೆ ಸುಳ್ಳು. ತಹಶೀಲ್ದಾರ್ ಮತ್ತು ಉಪವಿಭಾಗಾಧಿಕಾರಿಯವರ ಕಛೇರಿಯಿಂದ ನಾವು ಅತಿಕ್ರಮಿಸಿರುವ ಜಮೀನನ್ನು ತೆರವು ಮಾಡುವಂತೆ ನೋಟೀಸ್ ಕೊಡಲಾಗಿದ್ದರೂ ಕೂಡ ಇಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ತಹಶೀಲ್ದಾರ್ ರವರು ಸ್ಥಳಕ್ಕೆ ಬಂದು ಹೋದ ನಂತರ ಆರೋಪಿತರಿಗೆ ನಾವು ಹಲ್ಲೆ ಮಾಡಿದ್ದೇವೆಂದು ನನ್ನ ಮತ್ತು ನನ್ನ ತಮ್ಮನ ವಿರುದ್ಧ ಕೆ.ಆರ್.ಎಸ್ ಪೋಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. 1ನೇ ಆರೋಪಿ ಹಾಗೂ ಆತನ ತಾಯಿ ನಾವು ಅಕ್ರಮವಾಗಿ ಭೂ ಒತ್ತುವರಿ ಮಾಡಿದ್ದೇವೆಂದು ಸಂಬಂಧಪಟ್ಟ ಇಲಾಖೆಗೆ ದೂರು ದಾಖಲು ಮಾಡಿರುವ ಕಾರಣದಿಂದ ಅವರ ವಿರುದ್ಧ ಗಲಾಟೆ ಮಾಡಿದ್ದು ಅದರ ಸಂಬಂಧ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿ ಈಗ

ಸದರಿ ಪ್ರಕರಣ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವುದು ನನಗೆ ಗೊತ್ತಿದ್ದರೂ ಕೂಡ ಗೊತ್ತಿಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು ಆತನ ತಾಯಿ ನಮ್ಮ ವಿರುದ್ದ ರೆವಿನ್ಯೂ ಇಲಾಖೆಗೆ ಭೂ ಒತ್ತುವರಿ ಸಂಬಂಧ ದೂರು ದಾಖಲು ಮಾಡಿದ್ದ ಕಾರಣ ಅವರ ಮೇಲೆ ಹಲ್ಲೆ ಮಾಡಿದ್ದು ಅವರು ನಮ್ಮ ವಿರುದ್ದ ದೂರು ಕೊಡಬಹುದು ಎಂದು ಮನಗೊಂಡು ನಾವೇ ಮೊದಲು ಸುಳ್ಳು ಕೇಸನ್ನು ಆರೋಪಿತರ ವಿರುದ್ದ ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮೇಲೆ ಯಾವುದೇ ರೀತಿಯಾಗಿ ಗಲಾಟೆ ತೆಗೆದು ಹಲ್ಲೆ ಮಾಡಿಲ್ಲ ಆದರೂ ಕೂಡ ಅವರ ವಿರುದ್ದ ಸುಳ್ಳು ದೂರುಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.